ಕೆಲವರಿಗೆ ಬಡತನದ ಸಂಕೋಲೆಯಿಂದ ಮುಕ್ತಿ ಕಾಣುವಾಸೆ. ಇನ್ನೂ ಕೆಲವರಿಗೆ ಅದೇ ಬಡತನ ಮೆಟ್ಟಿ ಶ್ರೀಮಂತನಾಗುವಾಸೆ. ಮತ್ತೂ ಕೆಲವರಿಗೆ ಸಿರಿತನವ ತೊಡೆದು ಸಾಮಾನ್ಯನಾಗುವಾಸೆ. ಹೀಗೆ ಒಬ್ಬೊಬ್ಬರಿಗೆ ಒಂದೊಂದು ಆಸೆಯಿದ್ದಂತೆ ಬೆಂಗಳೂರಿನ ಗಿರೀಶ್ ಕುಮಾರ್‌ಗೆ ವಿಶ್ವ ದಾಖಲೆಗಳನ್ನು ನಿರ್ಮಿಸುವಾಸೆ.

ಅದು ತನ್ನ ದಾಖಲೆಗಳನ್ನು ತಾನೇ ಮುರಿಯುವಾಸೆ. ಹೀಗಾಗಿಯೇ ಅವರ ಹೆಸರಿನ ಜೊತೆಗೆ ಗಿನ್ನೆಸ್ ಸೇರಿಕೊಂಡಿದ್ದು, 'ಗಿನ್ನೆಸ್ ಗಿರೀಶ್' ಎಂದೇ ಅವರು ಬಹುತೇಕರಿಗೆ ಪರಿಚಿತರು. ಗಿನ್ನೆಸ್ ದಾಖಲೆ, ಲಂಡನ್ ವರ್ಲ್ಡ್ ರೆಕಾರ್ಡ್, ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್, ಏಷಿಯಾ ಬುಕ್ ಆಫ್ ರೆಕಾರ್ಡ್ಸ್, ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಹಾಗೂ ಮಿರಾಕಲ್ ವರ್ಲ್ಡ್ ರೆಕಾರ್ಡ್ಸ್‌ಗಳು ಅವರ ಹೆಸರಿನಲ್ಲಿವೆ.

ಪಂಡಿತ್ ಸಂಪತ್ ಕುಮಾರ್ ಶರ್ಮಾಜಿ ಗರಡಿಯಲ್ಲಿ ಪಳಗಿದ ಗಿರೀಶ್, ಸ್ವತಃ ಸಂಗೀತ ಕಲಾವಿದರೂ ಹೌದು. ಕಳೆದ 23 ವರ್ಷಗಳಿಂದ ಬೆಂಗಳೂರಿನಲ್ಲಿ ಶ್ರೀ ವೀಣಾ ವಾಣಿ ಸಂಗೀತ ಶಾಲೆಯನ್ನು ಅವರು ನಡೆಸುತ್ತಿದ್ದಾರೆ. ಶರ್ಮಾಜಿ ಅವರು ಕಾಲವಾದ ಬಳಿಕ ಅವರು ಹುಟ್ಟುಹಾಕಿದ್ದ ಶ್ರೀ ವೀಣಾ ವಾಣಿ ಸಂಗೀತ ಶಾಲೆಯ ನೊಗ ಹೊತ್ತವರು ಇವರೇ. ಈ ಸಂಸ್ಥೆಗೀಗ 47ನೇ ವರ್ಷದ ವಾರ್ಷಿಕೋತ್ಸವದ ಸಂಭ್ರಮ. ಇಲ್ಲಿ 14 ರೀತಿಯ ವಾದ್ಯ, 6 ರೀತಿಯ ಹಾಡುಗಾರಿಕೆ ಹಾಗೂ ಭರತನಾಟ್ಯವನ್ನು ಕಲಿಸಲಾಗುತ್ತದೆ.

## ದಾಖಲೆ ನಿರ್ಮಾಣದ ಮೊಳಕೆಯೊಡೆದದ್ದು ಹೀಗೆ...

ದಾಖಲೆಗಳನ್ನು ನಿರ್ಮಿಸುವ ಆಸಕ್ತಿ ತನ್ನೊಳಗೆ ಮೊಳಕೆಯೊಡೆದ ಕುರಿತು ಗಿರೀಶ್ ಹೇಳುವುದು ಹೀಗೆ. 'ಪ್ರತಿ ವರ್ಷ ಸಂಗೀತ ಶಾಲೆಯ ವಾರ್ಷಿಕೋತ್ಸವ ಹಮ್ಮಿಕೊಳ್ಳುತ್ತೇವೆ. ಅದರಂತೆ ಶಾಲೆಯ 37ನೇ ವಾರ್ಷಿಕೋತ್ಸವ ಅಂಗವಾಗಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ, 150 ಮಂದಿ ಸಂಗೀತ ಪ್ರತಿಭೆಗಳು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಪಾಶ್ಚಿಮಾತ್ಯ ಸಂಗೀತ ವಿಧಾನವಾದ ಕೀಬೋರ್ಡ್‌ನಲ್ಲಿ ನುಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.'

'ಆ ಸಂಗೀತ ಕಾರ್ಯಕ್ರಮ ವೀಕ್ಷಿಸಿದ ರಮೇಶ್ ಕುಮಾರ್ ಎಂಬುವರು, 'ಸರ್ ಕಾರ್ಯಕ್ರಮ ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಇದೇ ಮಾದರಿಯಲ್ಲಿ ಈ ಕಾರ್ಯಕ್ರಮವನ್ನು ದೊಡ್ಡ ಮಟ್ಟದಲ್ಲಿ ಹಮ್ಮಿಕೊಳ್ಳಿ. ಆ ಮೂಲಕ ಗಿನ್ನಿಸ್ ದಾಖಲೆ ನಿರ್ಮಿಸಬಹುದು' ಎಂದರು. ಅವರ ಆ ಮಾತು ನನ್ನಲ್ಲಿ ಗಿನ್ನೆಸ್ ದಾಖಲೆ ಸೇರಿದಂತೆ ಹಲವು ದಾಖಲೆಗಳನ್ನು ನಿರ್ಮಿಸುವ ಆಸಕ್ತಿಯನ್ನು ನನ್ನೊಳಗೆ ಮೊಳಕೆಯೊಡೆಯುವಂತೆ ಮಾಡಿತು. ಅದು ಈಗ ಅಭ್ಯಾಸವಾಗಿಬಿಟ್ಟಿದೆ.'

## ಮೊದಲ ಪ್ರಯತ್ನವೇ ದಾಖಲೆ!

'ರಮೇಶ್ ಕುಮಾರ್ ಅವರ ಸಲಹೆಯಂತೆ ಗಿನ್ನೆಸ್ ದಾಖಲೆ ನಿರ್ಮಾಣ ಮಾಡುವ ನಿಟ್ಟಿನಲ್ಲಿ ತೊಡಗಿಕೊಂಡೆ. ದಾಖಲೆಗಳನ್ನು ಪರಿಶೀಲಿಸಿದಾಗ ಅಚ್ಚರಿಯೊಂದು ಕಾದಿತ್ತು. ಶಾಲಾ ವಾರ್ಷಿಕೋತ್ಸವ ಅಂಗವಾಗಿ ನಾವು ಆಯೋಜಿಸಿದ್ದ 'ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು 150 ಮಂದಿ ಕೀಬೋರ್ಡ್‌ನಲ್ಲಿ ನುಡಿಸುವ ಕಾರ್ಯಕ್ರಮ'ವೇ ಗಿನ್ನೆಸ್ ದಾಖಲೆಯಾಗಿತ್ತು. ಅದಕ್ಕೂ ಮೊದಲು 123 ಮಂದಿ ಇಂತಹ ಕಾರ್ಯಕ್ರಮ ನಡೆಸಿ ದಾಖಲೆ ನಿರ್ಮಿಸಿದ್ದರು. ಬಳಿಕ 2015ರಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು 375 ಮಂದಿ ಕೀಬೋರ್ಡ್‌ನಲ್ಲಿ ನುಡಿಸಿ ಅಧಿಕೃತವಾಗಿ ಗಿನ್ನೆಸ್ ದಾಖಲೆ ನಿರ್ಮಿಸಿದೆವು. ಅದೇ ದಾಖಲೆಯನ್ನು ನಾವೇ ಮುರಿದು ಮತ್ತೆ 400 ಮಂದಿಯಿಂದ ಇಂತಹದ್ದೇ ಕಾರ್ಯಕ್ರಮ ಆಯೋಜಿಸಿ ಗಿನ್ನೆಸ್ ದಾಖಲೆ ನಿರ್ಮಿಸಿದೆವು. ಅಲ್ಲಿಂದ ಶುರುವಾದ ದಾಖಲೆ ನಿರ್ಮಾಣದ ಓಟ ಇನ್ನೂ ಸಾಗುತ್ತಲೇ ಇದೆ' ಎನ್ನುತ್ತಾರೆ ಗಿರೀಶ್.

| 4 | 4 | 1 |
|---|---|---|
| ಏಷಿಯಾ ಬುಕ್ ಆಫ್ ರೆಕಾರ್ಡ್ಸ್ | ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ | ಮಿರಾಕಲ್ ವರ್ಲ್ಡ್ ರೆಕಾರ್ಡ್ಸ್ |



ಗಿರೀಶ್ ಆರಂಭಿಸಿರುವ ಅಭಿಯಾನಕ್ಕೆ ಕ್ರಿಕೆಟಿಗ ಧೋನಿ ಸಹಿ ಹಾಕಿದ ಕ್ಷಣ

## ಲಂಡನ್ ಯುನಿವರ್ಸಿಟಿಯಿಂದ ಡಾಕ್ಟರೇಟ್

ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಪಾಶ್ಚಿಮಾತ್ಯ ಕೀಬೋರ್ಡ್‌ನಲ್ಲಿ ನುಡಿಸುವುದು ತುಂಬಾ ಕಷ್ಟದ ಕೆಲಸ. ಅದರಲ್ಲೂ ಗಿನ್ನೆಸ್ ದಾಖಲೆ ನಿರ್ಮಿಸುವುದೆಂಬುದು ಸವಾಲಿನದ್ದಾಗಿತ್ತು. ಎರಡು ಬಾರಿ ಈ ವಿಚಾರದಲ್ಲಿ ದಾಖಲೆ ಮಾಡಿದ್ದಕ್ಕಾಗಿ ಲಂಡನ್ ಯುನಿವರ್ಸಿಟಿಯು ನನ್ನನ್ನು ಗುರುತಿಸಿ, ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ ಎನ್ನುತ್ತಾರೆ ಅವರು.

## ಸೈನಿಕರಿಗಾಗಿ ಅಭಿಯಾನ

ನಮ್ಮ ನೆಮ್ಮದಿಯ ನಾಳೆಗೆ ತಮ್ಮ ಇಂದಿನ ದಿನವನ್ನು ಬಲಿಕೊಡುತ್ತಿರುವ ಸೈನಿಕರಿಗಾಗಿ ಎಷ್ಟೇ ಸಲಾಂ ಹೊಡೆದರೂ ಸಾಲದು. ಗಡಿ ಕಾಯುತ್ತಾ ದೇಶದ ರಕ್ಷಣೆ ಮಾಡುತ್ತಿರುವ ಸೈನಿಕರಿಗೆ ಸಾರ್ವಜನಿಕರಿಂದ ಅಭಿನಂದನಾ ಸಂದೇಶ ತಿಳಿಸಲು 'ಭಾರತೀಯ ಸೈನಿಕರಿಗೆ ವಿಶ್ವದ ಅತಿದೊಡ್ಡ ಅಭಿನಂದನಾ ಪತ್ರ' (ವರ್ಲ್ಡ್ ಲಾರ್ಜೆಸ್ಟ್ ಗ್ರಾಟಿಟ್ಯುಡ್ ಲೆಟರ್ ಟು ಇಂಡಿಯನ್ ಸೋಲ್ಜರ್) ಅಭಿಯಾನವನ್ನು ಗಿರೀಶ್ ಅವರು ಶುರುಮಾಡಿದ್ದಾರೆ.

ಈ ಅಭಿಯಾನವೂ ಯಶಸ್ವಿಯಾಗಿ ಪೂರ್ಣಗೊಂಡರೆ, ಇದೂ ಲಂಡನ್ ವರ್ಲ್ಡ್ ರೆಕಾರ್ಡ್ ಆಗಲಿದೆ. ಅಭಿಯಾನಕ್ಕಾಗಿ ಗಿರೀಶ್ ಅವರ ತಂಡ 6 ಅಡಿ ಎತ್ತರ ಹಾಗೂ 140 ಅಡಿ ಉದ್ದದ ಕ್ಯಾನ್ವಸ್ ಮೇಲೆ ಈಗಾಗಲೇ 17 ಸಾವಿರ ಮಂದಿಯಿಂದ ಸಹಿ ಹಾಗೂ ಅಭಿನಂದನಾ ಸಂದೇಶವನ್ನು ಪಡೆದಿದೆ. ಕ್ರಿಕೆಟಿಗರಾದ ಮಹೇಂದ್ರಸಿಂಗ್ ಧೋನಿ, ಹರಭಜನ್ ಸಿಂಗ್, ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಸೇರಿದಂತೆ ಹಲವು ಗಣ್ಯರು ಅಭಿನಂದನಾ ಸಂದೇಶ ಬರೆದು ಸಹಿ ಹಾಕಿದ್ದಾರೆ.

## ಒಂದು ಕೋಟಿ 'ನಾನು ಕನ್ನಡಿಗ'

ಒಂದು ಕೋಟಿ ಕನ್ನಡಿಗರನ್ನು ಸಾಮಾಜಿಕ ಜಾಲತಾಣದ ಒಂದೇ ವೇದಿಕೆಯಡಿ ತರುವ ನಿಟ್ಟಿನಲ್ಲಿ 'ನಾನು ಕನ್ನಡಿಗ' ಹ್ಯಾಶ್ ಟ್ಯಾಗ್ ಅಭಿಯಾನವನ್ನೂ ಗಿರೀಶ್ ಶುರು ಮಾಡಲಿದ್ದು, ಆಸಕ್ತರು ಈ ಅಭಿಯಾನದಲ್ಲಿ ಪಾಲ್ಗೊಂಡು ತಮ್ಮ ಫೋಟೊ ಅಪ್‌ಲೋಡ್ ಮಾಡಿ 'ನಾನೂ ಕನ್ನಡಿಗ' ಎಂಬ ಸಂದೇಶವನ್ನು ಹಾಕಬೇಕಾಗುತ್ತದೆ. ಒಂದು ಕೋಟಿ ಮಂದಿಯನ್ನು ನವೆಂಬರ್ 1ರ ರೊಳಗೆ ಈ ಹ್ಯಾಶ್ ಟ್ಯಾಗ್ ಅಡಿ ತರುವ ಯೋಜನೆಯನ್ನು ಅವರು ಹೊಂದಿದ್ದಾರೆ.

## ಮನದ ಹಂಬಲಕ್ಕಾಗಿ ದಾಖಲೆ

ಯಾವ ಉದ್ದೇಶಕ್ಕಾಗಿ ದಾಖಲೆ ನಿರ್ಮಾಣ ಮಾಡುತ್ತಿದ್ದೀರಿ ಎಂಬ ಪ್ರಶ್ನೆಗೆ ಉತ್ತರಿಸುವ ಗಿರೀಶ್, 'ದಾಖಲೆಗಳನ್ನು ನಿರ್ಮಿಸುವುದರಿಂದ ನನಗೆ ಆರ್ಥಿಕವಾಗಿ ಯಾವುದೇ ಲಾಭವಾಗದು. ಹಾಗೆ ನೋಡುವುದಾದರೆ, ದಾಖಲೆ ನಿರ್ಮಾಣಕ್ಕೆ ವೈಯಕ್ತಿಕವಾಗಿಯೇ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿದೆ. ಒಂದು ಗಿನ್ನಿಸ್ ದಾಖಲೆ ನಿರ್ಮಾಣ ಮಾಡಲು ಕಡಿಮೆಯೆಂದರೂ ₹10 ಲಕ್ಷದಿಂದ ₹15 ಲಕ್ಷ ಖರ್ಚಾಗುತ್ತಿದೆ. ಲಂಡನ್ ವರ್ಲ್ಡ್ ರೆಕಾರ್ಡ್‌ಗೆ ₹3 ಲಕ್ಷದಿಂದ ₹4 ಲಕ್ಷ ಖರ್ಚಾಗುತ್ತದೆ. ಜೀವನದಲ್ಲಿ ಏನಾದರೂ ಸಾಧನೆ ಮಾಡಬೇಕು ಹಾಗೂ ಹೆಸರು ಗಳಿಸಬೇಕೆಂಬ ಹಂಬಲದಿಂದ ಈ ಕಾರ್ಯದಲ್ಲಿ ತೊಡಗಿಕೊಂಡಿದ್ದೇನೆ ಅಷ್ಟೆ' ಎನ್ನುತ್ತಾರೆ.

ಸಾಕಷ್ಟು ಮಂದಿಗೆ ವಿಶ್ವ ದಾಖಲೆಗಳನ್ನು ನಿರ್ಮಿಸಲು ನೆರವಾಗಿರುವ ಗಿರೀಶ್ ಅವರು ವಿಶ್ವ ದಾಖಲೆ ನಿರ್ಮಿಸುವ ಆಸೆಯಿಂದ ಯಾರೇ ಬಂದರೂ ಮಾರ್ಗದರ್ಶನ ನೀಡಿ ಅವರನ್ನು ಪ್ರೋತ್ಸಾಹಿಸುತ್ತಿದ್ದಾರೆ. ■